doc-28
T.P-2

Regd. No. M 1229 | 43rd Year | Sri 'Satyavadi' Mysore | 7—4—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಆರಮನೆ ಸಂಸ್ಥೇದಾರ್ ಎಂ. ವಿ ಸುಬ್ಬರಾಯರು [ಬಿಡಿ ಪ್ರತಿ 3ಪೈ

Protectthecow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಸತ್ಯ ವಾಕ್

ವಿಶ್ವಸಂಸ್ಥೆ 3— ವಿಶ್ವದ ಸದಸ್ಯ ರಾಷ್ಟ್ರಗಳ ಆಗತ್ಯವನ್ನು ವಿಶ್ವಸಂಸ್ಥೆ ಸಾಕಷ್ಟು ಪೂರೈಸಿಲ್ಲ ಎಂಬದಾಗಿ ಈ ದಿನ ಮಹಾಕಾರ್ಯದರ್ಶಿ ಡಾಗ್ ಹ್ಯಾ ವರ್‌ಶೀಲ್ಡರು ನುಡಿದಿದ್ದಾರೆ.

ವಿದೇಶಿ ವಿನಿಮಯ ಕಾನೂನು ಉಲ್ಲಂಘನೆಗೆ ಶಿಕ್ಷೆ

ನವದೆಹಲಿ 6— ವಿದೇಶೀ ಧನ ವಿನಿಮಯ ನಿಬಂಧನೆ ಕಾನೂನನ್ನು ಉಲ್ಲಂಘಿಸಿದ 31 ಪ್ರಕರಣಗಳ ಬಗ್ಗೆ ಈ ವರ್ಷದ ಫೆಬ್ರವರಿ ಮತ್ತು ಮಾರ್ಚಿ ತಿಂಗಳಲ್ಲಿ ವಿಚಾರಣೆಗಳು ನಡೆದು ಕಾನೂನನ್ನು ಉಲ್ಲಂಘಿಸಿದ ವ್ಯಕ್ತಿಗಳು ಮತ್ತು ಸಂಸ್ಥೆಗಳ ಮೇಲೆ ಒಟ್ಟು 34575 ರೂಗಳ ದಂಡವನ್ನು ವಿಧಿಸಲಾಯಿತು.

ಲಿಂಕನ್ ಮತ್ತು ಗಾಂಧಿ

ವಾದಂತಸು 2— ಅಬ್ರಹಾಂ ಲಿಂಕನ್ ಮತ್ತು ಮಹಾತ್ಮ ಗಾಂಧಿ ಇವರಿಬ್ಬರೂ ತಮ್ಮತಮ್ಮ ಸಂಸ್ಕೃತಿಯ ನೈಜ ಪ್ರತಿಬಿಂಬಗರು ; ಲಿಂಕನ್ನರು ಕ್ರಿದ್ಧಾವಂತ ನೈಜ ಅಮೇರಿಕನ್ನರಾಗಿದ್ದಂತೆ, ಗಾಂಧಿಯವರು ಸಮಗ್ರ ಭಾರತೀಯರು.

ಸನ್ಮಾನ ಸಮಾರಂಭ

ಮೈಸೂರು ನಗರದ ಸಂತೇಪೇಟೆ ವರ್ತಕರು ನಗರದ ವಾರ್ಡ ಸಭಾಧ್ಯಕ್ಷ ಶ್ರೀ ಎ ಎಸ್ ಕೆಂಗೇಗೌಡರವರ ಗೌರವಾರ್ಥವಾಗಿ ತಾ || 12 ಭಾನುವಾರ ಶ್ರೀಕೃಷ್ಣಪಾರ್ಕಿನಲ್ಲಿರುವ ದಿವಾಕ್ ಕೃಷ್ಣ ಮಂದಿರದವರ ಜಂಗಲೆಯಲ್ಲಿ ಸನ್ಮಾನ ಸಮಾರಂಭವನ್ನು, ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿರುತ್ತಾರೆ.

ಜಾಲಿಯ ಪಂಚಾಂಗ

ಅ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
ಪ್ರಮಾದಿ ಆಮೂ (ಬೆ 7-29) ರೇವತಿ

ಮೈಸೂರು ಗೌರ್ನರ್

ಮೈಸೂರಿನ ಗೌರ್ನರರು ಮೂರು ತಿಂಗಳ ಕಾಲ ಅಮೇರಿಕಾ, ಯೂರೋಪು, ಆಫ್ರಿಕಾಗಳಲ್ಲಿ ಪ್ರವಾಸ ಮಾಡಲು 15 ನೇ ಏಪ್ರಿಲ್ಲಿನಂದು ಬೊಂಬಾಯಿನಿಂದ ತೆಳುವರೆಂದೂ, ಹಂಗಾಮಿ ಗೌರ್ನರರು ಯಾರಾಗುವುದು ಇನ್ನೂ ಗೊತ್ತಿಲ್ಲವೆಂದೂ, ರಾಷ್ಟ್ರಾಧ್ಯಕ್ಷ ತಿರ್ಮೊಡನೆ ಮಾತುಕತೆ ನಡೆಸಿ, ಗೌರ್ನರರನ್ನು ನೇ ಎಸುವರೆಂದೂ, ಗೌರ್ನರರು ಯಾರಾದರೂ, ಬೆಂಗಳೂರಿಗೆ ತಾ || 13-14 ರಲ್ಲಿ ಬರುವರೆಂದೂ ಮುಖ್ಯ ಮಂತ್ರಿಯವರು ನಿನ್ನೆ ಪತ್ರಿಕೆಯವರಿಗೆ ತಿಳಿಸಿದರು.

ಚೀನಾ ಮೇಲೆ

ಕಾರ್ಯಾಚರಣೆಯಿಲ್ಲ

ಅಲಹಾಬಾದು 6— ನಮಗೆ ಟಿಬೆಟ್ ಬಗ್ಗೆ ಪೂರ್ಣ ಸಹಾನುಭೂತಿ ಇರುವುದಾದರೂ, ಭಾರತ ಮತ್ತು ಚೈನಾಕ್ಕೆ ಇರುವ ಮೈತ್ರಿಗೆ ಯಾವರೀತಿಯಲ್ಲೂ ಭಂಗಬರಬಾರದೆಂದು, ಚೈನಾ ಮೇಲೆ ಯಾವ ಕಾರ್ಯಕ್ರಮವನ್ನು ಕೈಗೊಳ್ಳಲು ತಾವು ಇಚ್ಛಿಸುವುದಿಲ್ಲವೆಂದು ಪಂ|| ನೆಹರು ಹೇಳಿರುವರು.

ಆಹಾರವಲಯ

ಬೆಂಗಳೂರು 6— ದಕ್ಷಿಣ ಆಹಾರ ವಲಯದ ಭವಿಷ್ಯದ ವಿಷಯದಲ್ಲಿ ಕೇಂದ್ರ ಸರಕಾರವು ನಿರ್ಧಾರ ಮಾಡಲಿರುವುದೆಂದೂ, ಅಲ್ಲಿಯವರೆಗೆ ಈಗಿನಂತೇ ಇರುವುದೆಂದೂ ಮುಖ್ಯ ಮಂತ್ರಿ ಶ್ರೀ ಜತ್ತಿ ಹೇಳಿರುವರು.

ತೆರಿಗೆ ಹೆಚ್ಚಿಸುವುದು ಬೇಡ

ಮೈಸೂರು 5— ನಿನ್ನೆ ಶ್ರೀ ಕೆಂಗೆಗೌಡರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ ಸಭೆ ಬಜೆಟ್ ವಿಚಾರಣೆಗಿನಲ್ಲಿ ತೆರಿಗೆ ಹೆಚ್ಚಿಸುವ ಬಗ್ಗೆ ಅನೇಕ ಸದಸ್ಯರು ವಿರೋಧ ವ್ಯಕ್ತಪಡಿಸಿದರು.

ಮಾಸ್ಟರ್ ತಾರಾಸಿಂಗರ ಆಮರಣಾಂತ ಉಪವಾಸ

ಮಾಸ್ಟರ್ ತಾರಾಸಿಂಗರ ಹೇಳಿಕೆ

ನವದೆಹಲಿ 6— ಪಂಜಾಬಿನ ಗುರುದ್ವಾರಗಳ ಆಡಳಿತದಲ್ಲಿ ಹಸ್ತಕ್ಷೇಪಕ್ಕೆ ಪ್ರತಿಭಟಿಸಿ ತಾವು ತಾ|| 16 ರಿಂದ ತಾವು ಆಮರಣಾಂತ ಉಪವಾಸ ಕೈಕೊಳ್ಳುವುದಾಗಿ ಪ್ರಧಾನಿ ನೆಹರೂರವರಿಗೆ ತಾವು ಬರೆದಿರುವುದಾಗಿ ಮಾಸ್ಟರ್ ತಾರಾಸಿಂಗರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು — ತಾ || 16 ಬೆಳಿಗ್ಗೆ ಪ್ರಸಾದ ಸ್ವೀಕರಿಸಿ, ನವದೆಹಲಿಯ ಗುರುದ್ವಾರ ರಕಾಬಜಂದಿನಲ್ಲಿ ಉಪವಾಸ ಪ್ರಾರಂಭಿಸುವುದಾಗಿ ಅವರು ಹೇಳಿದರು — ತಾ|| 16 ರಂದು ಸಿಕ್ಖರು ಸಾಮೂಹಿಕ ಉಪವಾಸವನ್ನಾಚರಿಸಲೂ, ಮುಷ್ಕರ ನಡೆಸಲೂ ತಾರಾಸಿಂಗರು ಕರೆಯಿತ್ತಿರುವರು

ಹಿಂದುಳಿದೋರು

ಹಿಂದುಳಿದತನವನ್ನು ಒಬ್ಬನು ಅನುಸರಿಸುತ್ತಿರುವ ವೃತ್ತಿಯಿಂದ ನಿರ್ಧರಿಸಬೇಕಲ್ಲದೆ ಜಾತಿಯಿಂದಲ್ಲವೆಂದು ಡೆಲ್ಲಿಯಲ್ಲಿ ಶನಿವಾರ ಕೇಂದ್ರ ಗೃಹಮಂತ್ರಿ ಪಂತರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ ನಿರ್ಧರಿಸಲಾಯಿತು.

ಲಕ್ನೊ 6— ದಲೈ ಲಾಮಾರು ಉತ್ತರ ಪ್ರದೇಶದಲ್ಲಿ ನೆಲಿಸಬಹುದೆಂದು ಉತ್ತರ ಪ್ರದೇಶದ ಮುಖ್ಯ ಮಂ ಶ್ರೀ ಹೇಳಿರುವರು.

ಹಾಸನ 5— ಹಾಸನದಲ್ಲಿ ಪೂರ್ಣ ಪಾನನಿರೋಧವನ್ನು ಜಾರಿಗೆ ತರಲು ವಿನಂತಿಸುವ ಠರಾವು ಜಿಲ್ಲಾ ಕಾಂಗ್ರೆಸ್ಸು ಕಾರ್ಯಕಾರಿ ಸಮಿತಿ ಮೀಟಿಂಗಿನಲ್ಲಿ ಮಂಜೂರಾಯಿತು.

ಜೀವಿತ-ಬುದ್ಧನ ಹೇಳಿಕೆ

ನವದೆಹಲಿ 6— ಟಿಬೆಟ್ಟಿನ ಹಿಂದಿನ ಸ್ಥಳೀಯ ಸರಕಾರವು ಅಶಾಸ್ತ್ರೀಯವಾಗಿದ್ದ ಸೆರಾ ಬೌದ್ಧ ಸನ್ಯಾಸಾಶ್ರಮಕ್ಕೆ 250 ಒಂದೂಕಗಳನ್ನೂ ಡಜ್ ಪೆಟ್ಟಿಗೆ ಮದ್ದು ಗುಂಡನ್ನೂ ಕಳಿಸಿ ಅಲ್ಲಿದ್ದವರು ತಮ್ಮ ಸನ್ಯಾಸಿ ವಸ್ತ್ರಗಳನ್ನು ತೆಗೆದು ಲೌಕಿಕ ಉಡುಪನ್ನು ಧರಿಸಲು ಒತ್ತಾಯ ಪಡಿಸಿತೆಂದು ಟಿಬೆಟ್ಟಿನ ಜೆಂದೋ ಲಾಮಾ ಆಶ್ರಮದ ' ಜೀವಿತ ಬುದ್ಧ ' ಪೆಲಲಾ ಚೋಲಿಯುಸಾಂಜೆಯವರು ನವ ಚೀನಾ ವಾರ್ತಾ ಸಂಸ್ಥೆಗೆ ತಿಳಿಸಿದರೆಂದು ವರದಿಯಾಗಿದೆ.

ಮಿಟ್ರಿಕ್ ಪದ್ಧತಿ

ತಿರುವೇಂದ್ರಂ 6— ಕೇಂದ್ರ ಇಲಾಖೆಗಳಲ್ಲಿ ಮಿಟ್ರಿಕ್ ಪದ್ಧತಿ ಜಾರಿಗೆ ತರಲಾಗುವುದೆಂದು ಕೇಂದ್ರ ವಾಣಿಜ್ಯ ಮಂತ್ರಿವಲಯದ ಜಂಟಿ ಕಾರ್ಯದರ್ಶಿ ವೆಂಕಟಾಚಲಂ ಹೇಳಿದರು.

ಬೆಂಗಳೂರು 6— ಬೆಳಗಾಂ ಮತ್ತು ಕಾರವಾರದಲ್ಲಿ ಕಂಸಿಂಕರಣ ಚಳವಳಿ ಬಗ್ಗೆ ಸರಕಾರಕ್ಕೆ ಏನು ಗೊದ್ದಿಯೂ ಬಂದಿಲ್ಲವೆಂದು ಮುಖ್ಯ ಮಂತ್ರಿಯವರು ಹೇಳಿರುವರು.

ಅಲಹಾಬಾದು 6— ಗ್ರಾಮ ಸಹಕಾರ ಸಂಘಗಳನ್ನು ಸ್ಥಾಪಿಸಿ, ಭೂಮಿಯ ಮತ್ತು ಫ್ಯಾಕ್ಟರಿಗಳ ಉತ್ಪತ್ತಿಯನ್ನು ಹೆಚ್ಚಿಸಲು ಪಂ || ನೆಹರು ಕರೆಯಿತ್ತಿರುವರು.

ವಾಸ್ಕೊ 6— ಶಾಂತಿ ನಾಗರದ ಕಡೆಯಲ್ಲಿ ಶೈಶಾಂತಿವಲಯ ಸ್ಥಾಪಿಸಲು ಪಾಶ್ಚಾತ್ಯ ರಾಷ್ಟ್ರಗಳಿಗೆ ರತ್ನಾ ಕಡೆಯಿತ್ತಿದೆ.

ಪಂಚಾಂಗ ಸ್ವೀಕಾರ

ಮೈಸೂರು ಸಯ್ಯಾಜಿರಾವ್ ರಸ್ತೆಯಲ್ಲಿರುವ ನ್ಯೂ ಮಾಡಲ್ ಟೈಲರಿಂಗ್ ಹಾಲ್ ಮಾಲೀಕರಾದ ಶ್ರೀ ಎಂ ಎಲ್ ಶ್ರೀನಿವಾಸರಾಯರು ಕಳುಹಿಸಿರುವ ಶ್ರೀ ವಿಕಾರಿ ಸಂವತ್ಸರದ ಮೈಸೂರು ಸಿದ್ಧಾಂತ ಪಂಚಾಂಗವನ್ನು ವಂದನಾ ಪೂರ್ವಕವಾಗಿ ಸ್ವೀಕರಿಸಿದ್ದೇವೆ.

ನೈರಾಶ್ಯಂ ಪರಮಂ ಸುಖಂ

ಅಪಿ ರಾಜ್ಯಾದಪಿ ಸ್ವರ್ಗಾದಪೀಂದ್ರೋರಪಿ ಮಾಧವಾತ್ |
ಅಪಿ ಕಾಂತಾರಮಾಸಂಗಾನ್ನೈರಾಶ್ಯಂ ಪರಮಂ ಸುಖಂ ||

ಭೂಲೋಕದ ರಾಜ್ಯಪದವೀ ಪ್ರಾಪ್ತಿಯಿಂದ ಸುಖವೇ ಉತ್ತಮವೆಂದು ರಾಜ್ಯಕಾಮಿಗಳು ಹೇಳುತ್ತಾರೆ ; ನಶ್ವರವಾದ ಈ ಭೂಪತಿಯ ಸುಖಕ್ಕಿಂತ ಇಂದ್ರ-ಚಂದ್ರಲೋಕಗಳ ಸುಖವೇ ಒಂದು ಸ್ವರ್ಗಸುಖಾಪೇಕ್ಷಿಗಳ ಅಭಿಪ್ರಾಯವಾದರೆ, ಅದೂ ಅಶಾಶ್ವತವೆಂದು ಹೇಳುವ ಉತ್ತಮ ವರ್ಗದ ಜನರು— ರಮಾದೇವಿಯವರು ಅನುದಿನ ಪಾದಸೇವೆ ಮಾಡುತ್ತಿರಲು ಶೇಷಶಯ್ಯದಲ್ಲಿ ಸುಖ ಶಾಯಿಯಾಗಿರುವ ಮಾಧವನ (ಶ್ರೀ ಮಹಾವಿಷ್ಣುವಿನ) ವೈಕುಂಠ ಸುಖವೇ ಅತ್ಯುತ್ಕೃಷ್ಟವೆಂದು ಹೇಳುವರು.

ಒಸಕ ಜನರು ಆ ಸುಖವನ್ನು ಪರಿಹಾಸ್ಯಮಾಡುತ್ತಾ— ಬಸುಗುಟ್ಟು ತ್ತಿರುವ ಸಾವಿರ ಹೆಡೆಯುಳ್ಳ ಅದಿಶೇಷನನ್ನು ಹಾಸಿಗೆಯನ್ನು ಮಾಡಿಕೊಂಡು ಸುಖವನ್ನು ಆಪೇಕ್ಷಿಸುತ್ತಿರುವ ವಿಷ್ಣುವಿಗೆ ಏಕಾಂತ ಸುಖಕ್ಕೆ ಅವಕಾಶವೆಲ್ಲಿಯಿದು ? ಅನುಕೂಲಳಾದ ಧರ್ಮಕಾಂತೆಯೊಡನೆ ಹಂಸತೂಲಿಕಾ ತಲ್ಪದಲ್ಲಿರುವಾಗ ಅನುಭವಿಸುವ ಏಕಾಂತಸುಖವೇ ಪರಮಸುಖವೆಂದು ಸಾಧಿಸುವರು.

ಆ ಸುಖವೂ ಜಲಬಿಂದುವಿನಂತೆ ನಶ್ವರ : ನಿತ್ಯನಿರತಿಶಯವಾದ ಪರಮ ಸುಖವೆಂದರೆ, ಆಶಾತ್ಯಾಗ ಮಾತ್ರವೆಂಬುದು ಜ್ಞಾನಿಗಳಿಂದ ಅನುಭವಸಿದ್ಧವಾದ ನಿರ್ಣಯ ; ತ್ಯಾಗದಲ್ಲಿ ಅಶಾತತ್ಯಾಗಕ್ಕಿಂತ ಹಿರಿದಾದ ತ್ಯಾಗ ಇಲ್ಲವೇ ಇಲ್ಲ ; ಆದುದರಿಂದಲೇ ತ್ಯಾಗಕ್ಕಿಂತ ಸುಖ ಬೇರೊಂದಿಲ್ಲ ; ನಿರಾಹೇತುಕವಾದ ಆಶೆಯು (ತ್ಯಾಗವೇ) ನಾಶಕ್ಕೆ ಸಕಲ ಸುಖದ್ಯೋತಕ ; ಅರ್ಥಾತ್ ನಿರಾಶೆಯಿಂದಿರುವಿಕೆಯೇ ಮನುಜನ ನಿಜವಾದ ನಿತ್ಯಸುಖಸಾಧನ ; ಅದಕ್ಕಾಗಿ ಯತ್ನಿಸುವವನೇ ನಿಜವಾದ ನರನು., (ಧ. ಸಂ)

— ಪಕ್ಕದ ಚಿತ್ರ —

1 ಸಾರ್ಸಿಸ್ಟ್ ಎಂಬ ವಿಮಾನು ತನ್ನ ಅಂಗಗಳನ್ನು ಕಳೆದುಕೊಳ್ಳಬಹುದು ಮತ್ತೆ ಬೆಳೆಸಿಕೊಳ್ಳಬಹುದು.

2 ಅಮೇರಿಕಾದ ಹೊಸ ರಾಜ್ಯ ಅಲಾಸ್ಕಾದಲ್ಲಿ ಮನೆಗಳಲ್ಲಿ ಉಪಯೋಗಿಸುವ ಕಾರು ಒಂದು ಚಿಕ್ಕವಿಮಾನವಾಗಿದೆ.

3 ಕೆಂಪು ಕೂದಲಿನ ಜನರ ತಲೆಯಲ್ಲಿ 90000 ಸಾವಿರ ಕೂದಲುಗಳಿರುವದೆಂದೂ, ಶ್ಯಾಮವರ್ಣದ ತಲೆಯಲ್ಲಿ 105000 ಮತ್ತು ಹೊಂಬಣ್ಣದ ಕೂದಲುಳ್ಳವರ ತಲೆಯಲ್ಲಿ 140000 ಕೂದಲುಗಳಿರುವವೆಂದೂ ವಿಜ್ಞಾನಿಗಳು ಹೇಳುತ್ತಾರೆ.

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ For Quality Printing

ಅ ಶೋ ಕಾ ಫಾರ್ಮಸಿ

ಎಲ್ಯಾನ್ಸ್‌ಡೌನ್ ಬಜಾರ್ ಮೈಸೂರು

L. N. Press

Sivarampet, Mysore

Edited, Printed & Published by Dharma Prachara Nurala M S Krishna Rao, at the Satyavadi Press Chamarajapuram, Mysore

ಅಪೆರಾ— 3-4-59 ರಿಂದ

ಸಕಲರೂ ನೋಡಬೇಕಾದ ವರ್ಣರಂಜಿತ ಪೌರಾಣಿಕ ಚಿತ್ರ

ಸತೀ ತುಳಸಿ ತೆಲುಗು

ಪಾತ್ರ— ಎಸ್ ವರಲಕ್ಷ್ಮಿ, ಕೃಷ್ಣಕುಮಾರಿ, ಅಮರನಾಥ್, ಗುಮ್ಮಡಿ

ಪ್ರತಿದಿನ 3 ಆಟಗಳು

ವುಡ್‌ಲ್ಯಾಂಡ್ ಸಿನಿ ತಾ. 3-4-59 ನೇ ಶುಕ್ರವಾರದಿಂದ

ಯುಲ್. ಬಿ. ಫಿಲ್ಮ್ಸ್‌ರವರ

ಅನಾಡಿ

(ಹಿಂದಿ)

ತಾರಾಗಣ— ನೂತನ್, ರಾಜ್ ಕಪೂರ್

ಮೋತೀಲಾಲ್, ಶುಭಾ ಖೋಟೆ

ದಿಗ್ದರ್ಶನ : ಋಷಿಕೇಷ್ ಮುಖರ್ಜಿ

ಸಂಗೀತ : ಶಂಕರ್ ಜೈಕಿಶನ್

ಬಹು ದಿನಗಳಿಂದ ಎದುರುನೋಡುತ್ತಿದ್ದ ಈ ಚಿತ್ರವನ್ನು ನೋಡಲು ಮರೆಯಬೇಡಿ

[ದಿನವಹಿ 3 ಪ್ರದರ್ಶನಗಳು]